**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/734/2023 ದಿನಾಂಕ:25.01.2024
Comp. No.: 1275281

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ **75ನೇ 'ಗಣರಾಜ್ಯೋತ್ಸವ'** ಪ್ರಯುಕ್ತ ಮಕ್ಕಳಿಗೆ ವಿಶೇಷ ಚಟುವಟಿಕೆಗಳನ್ನು ಆಯೋಜಿಸುವ ಕುರಿತು.

**ಉಲ್ಲೇಖ:** ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:04.01.2024.

***

ದೇಶದ ಜನರು ಭಾರತ ಸಂವಿಧಾನವನ್ನು ತಮಗೆ ತಾವೇ ಸಮರ್ಪಿಸಿಕೊಂಡು ಭಾರತವು 'ಗಣರಾಜ್ಯ'ವಾಗಿ ಜಾರಿಗೆ ಬಂದು 75 ವಸಂತಗಳು ಸಂದಿರುವ ಈ ಶುಭ ಸಂದರ್ಭದಲ್ಲಿ, ಇದೇ **ಜನವರಿ 26, 2024 ರಂದು 75ನೇ 'ಗಣ ರಾಜ್ಯೋತ್ಸವ'**ವನ್ನು ಬಹಳ ವಿಜೃಂಭಣೆಯಿಂದ ಹಾಗೂ ವೈಶಿಷ್ಟ್ಯಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಭಾಗದ ಮಕ್ಕಳಲ್ಲಿ ಭಾರತ ಗಣರಾಜ್ಯವಾದ ಹಿನ್ನೆಲೆ, ಸಂವಿಧಾನದ ಮಹತ್ವ ಹಾಗೂ ಸಂವಿಧಾನವು ದೇಶದ ನಾಗರೀಕರಿಗೆ ಕೊಡಮಾಡಿರುವ ಅವಕಾಶಗಳ ಮಹತ್ವವನ್ನು ಸಾರಲು ಗ್ರಾಮ ಪಂಚಾಯತಿ 'ಅರಿವು ಕೇಂದ್ರ'ಗಳಲ್ಲಿ **ಜನವರಿ 26, 2024 ರಿಂದ ಜನವರಿ 31, 2024 ರವರೆಗೆ** ಈ ಕೆಳಕಂಡ ವಿಶೇಷ ಚಟುವಟಿಕೆಗಳನ್ನು ಕೈಗೊಳ್ಳಲು ತಿಳಿಸಿದೆ. ಉಲ್ಲೇಖಿತ ಸುತ್ತೋಲೆಯಲ್ಲಿ **'ಜನವರಿ–2024: ಗಣರಾಜ್ಯ, ಸಂವಿಧಾನ ಮತ್ತು ಮಕ್ಕಳು'** ಕುರಿತಂತೆ ಆಯೋಜಿಸಬೇಕಾದ ಚಟುವಟಿಕೆಗಳನ್ನು ವಿವರಿಸಲಾಗಿದೆ. ಮುಂದುವರೆದು ಮತ್ತಷ್ಟು ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಗ್ರಾಮ ಪಂಚಾಯತಿ 'ಅರಿವು ಕೇಂದ್ರ'(ಗ್ರಂಥಾಲಯ)ಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:**

ಗ್ರಂಥಾಲಯ ಮೇಲ್ವಿಚಾರಕರು ಅರಿವು ಕೇಂದ್ರಗಳಿಗೆ ಬರುವ ಎಲ್ಲಾ ಮಕ್ಕಳನ್ನು ಖಾತರಿಪಡಿಸಿಕೊಂಡು, ಅಂತಹ ಮಕ್ಕಳಿಗೆ ಕೆಳಕಂಡ ಚಟುವಟಿಕೆಗಳನ್ನು ಆಯೋಜಿಸುವುದು

- **ಸಂವಿಧಾನ ಪೀಠಿಕೆಯ ಓದು(Preamble Reading)-** ಜನವರಿ 26, 2024ರ 75ನೇ ಗಣ ರಾಜ್ಯೋತ್ಸವ ದಿನದಂದು ಸಂವಿಧಾನದ ಮೂಲ ಆಶಯಗಳ ಬಗ್ಗೆ ಮಕ್ಕಳಲ್ಲಿ ಎಳೆ ವಯಸ್ಸಿನಲ್ಲಿಯೇ ಅರಿವು ಮೂಡಿಸಲು ಭಾರತ ಸಂವಿಧಾನದ ಪೀಠಿಕೆ(Preamble)ಯನ್ನು ಸಾಮೂಹಿಕವಾಗಿ ಓದುವಂತೆ ಕ್ರಮವಹಿಸುವುದು.
- ಭಾರತ ಸಂವಿಧಾನ ಪೀಠಿಕೆ(Preamble) ಪ್ರತಿಯನ್ನು ನೀಡಿ ಮಕ್ಕಳಿಂದ ಬರೆಯಿಸಿ, ಅದರ ಸುತ್ತಲೂ ವಿವಿಧ ಬಣ್ಣಗಳಿಂದ ಸುಂದರವಾದ ಚೌಕಟ್ಟನ್ನು ಮಕ್ಕಳಿಂದ ರಚಿಸುವುದು. ಮಕ್ಕಳು ತಮ್ಮ ತಮ್ಮ ಮನೆಗಳಲ್ಲಿ ತಾವೇ ರಚಿಸಿದ ಸಂವಿಧಾನದ ಪೀಠಿಕೆಯ ಕಲಾಕೃತಿಯನ್ನು ಪ್ರದರ್ಶಿಸುವಂತೆ ತಿಳಿಸುವುದು.

- **ಸಂವಿಧಾನ ಕುರಿತು ರಸಪ್ರಶ್ನೆ /ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದು-** ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳು ಸೇರಿದಂತೆ ಸಂವಿಧಾನದ ಮಹತ್ವವನ್ನು ಸಾರುವ ಅಂಶಗಳ ಮೇಲೆ ಬೆಳಕು ಚೆಲ್ಲುವ ಕುರಿತಂತೆ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಿ, ಮಕ್ಕಳು ಈ ಚಟುವಟಿಕೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಉತ್ತೇಜಿಸುವುದು. ಹಾಗೆಯೇ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದು(ಪ್ರಶ್ನಾವಳಿ ಮತ್ತು ಪೂರಕ ಟಿಪ್ಪಣಿಯನ್ನು ಇ-ಮೇಲ್ ಮೂಲಕ ಕಳುಹಿಸಿ ಕೊಡಲಾಗುವುದು).

- **ತ್ರಿವರ್ಣದ ಕಲಾಕೃತಿ ರಚಿಸುವುದು-** ಅರಿವು ಕೇಂದ್ರಗಳಿಗೆ ಬರುವ ಎಲ್ಲಾ ಮಕ್ಕಳು ತಮ್ಮ ಎರಡೂ ಹಸ್ತಗಳಿಂದ ತ್ರಿವರ್ಣದ ಕಲಾಕೃತಿ ಹಾಗೂ ಅವರ ಕಲ್ಪನೆಯ ಅನುಸಾರ ತ್ರಿವರ್ಣದಲ್ಲಿ ವಿವಿಧ ರಚನೆಗಳನ್ನು ಮೂಡಿಸಲು ತಿಳಿಸುವುದು.







- **ತ್ರಿವರ್ಣ ಧ್ವಜ ಮತ್ತು ಬ್ಯಾಡ್ಜ್ ತಯಾರಿಸುವುದು**- ಗ್ರಂಥಾಲಯದಲ್ಲಿ ಮಕ್ಕಳು ಬಣ್ಣಗಳು ಮತ್ತು ಕಾಗದದೊಂದಿಗೆ ಸಮಯ ಕಳೆಯಬೇಕು ಮತ್ತು ತ್ರಿವರ್ಣ ಧ್ವಜ ಮತ್ತು ಬ್ಯಾಡ್ಜ್‌ನ್ನು ಬಟ್ಟೆ ಪಿನ್‌ನೊಂದಿಗೆ ತಯಾರಿಸಬೇಕು. ಈ ಬ್ಯಾಡ್ಜ್‌ನ್ನು ಅವರು ಜನವರಿ 26ರಂದು ತಮ್ಮ ಶಾಲೆಯ ಗಣರಾಜ್ಯೋತ್ಸವ ಸಮಾರಂಭ ಹಾಗೂ ಆಚರಣೆಗಳಲ್ಲಿ ಧರಿಸಲು ತಿಳಿಸುವುದು.

- **ದೇಶಭಕ್ತಿ ಗೀತ ಗಾಯನ–** ಗ್ರಂಥಾಲಯ ಮೇಲ್ವಿಚಾರಕರು ಗಣರಾಜ್ಯೋತ್ಸವ ದಿನದಂದು ಹಾಡುಗಳು ಹಾಗೂ ದೇಶಭಕ್ತಿ ಗೀತೆಗಳನ್ನು ಅರಿವು ಕೇಂದ್ರಗಳಲ್ಲಿ ಮಕ್ಕಳು ಹಾಡಲು ಅವಕಾಶ ಕಲ್ಪಿಸುವುದು. ಇದರಿಂದ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಉತ್ತಮ ಆಚರಣೆ ಸಾಧ್ಯವಾಗುತ್ತದೆ. ಮಕ್ಕಳು ಹಾಡುವುದನ್ನು ವಿಡಿಯೋ ಮಾಡುವುದು. ಈ ಚಟುವಟಿಕೆಯು ಮಕ್ಕಳಲ್ಲಿ ವಿಶ್ವಾಸ ಮತ್ತು ದೇಶಭಕ್ತಿಯನ್ನು ಮೂಡಿಸುತ್ತದೆ.

ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸದರಿ ಚಟುವಟಿಕೆಗಳ ಕುರಿತು ಪಂಚತಂತ್ರ 2.0 ತಂತ್ರಾಂಶದ ಈವೆಂಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್‌ನಲ್ಲಿ ಮಾಹಿತಿಯನ್ನು ಇಂದೀಕರಿಸಲು ತಿಳಿಸಿದೆ.

ಹೀಗೆ ಈ ಬಾರಿಯ ಗಣರಾಜ್ಯೋತ್ಸವವನ್ನು ಆಚರಿಸುವುದು.

ಅಲ್ಲದೇ, **ಜನವರಿ 26, 2024 ರಿಂದ ಜನವರಿ 26, 2025** ರವರೆಗಿನ ಒಂದು ವರ್ಷದ ಅವಧಿಯಲ್ಲಿ ಸಂವಿಧಾನ ರಚನೆಗೆ ಕಾರಣರಾದವರ ಜಯಂತಿಗಳ ಆಚರಣೆ, ರಾಷ್ಟ್ರೀಯ ದಿನಾಚರಣೆಗಳು, ಪಂಚಾಯತ್ ರಾಜ್ ದಿನಾಚರಣೆಗಳನ್ನು ಅರಿವು ಕೇಂದ್ರಗಳಲ್ಲಿ ಆಯೋಜಿಸಿ, ಸಂವಿಧಾನ 75ನೇ ವರ್ಷದ ಸಂಭ್ರಮೋತ್ಸವವನ್ನು ಆಚರಿಸಲು ನಿರ್ದೇಶನಗಳನ್ನು ಸಹ ಮುಂದೆ ನೀಡಲಾಗುವುದು.

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)**
**ರವರಿಂದ ಅನುಮೋದಿಸಲ್ಪಟ್ಟಿದೆ)**

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.